# ಪತ್ರಿಕಾ ಪ್ರಕಟಣೆ

ಸರ್ವೋಚ್ಚ ನ್ಯಾಯಾಲಯದ ಪರಿಛೇದ 377 ತೀರ್ಪಿನ ಕುರಿತು

ಸರ್ವೋಚ್ಚ ನ್ಯಾಯಾಲಯವು ಸುರೇಶ್ ಕುಮಾರ್ ಕೌಶಲ್ ವರ್ಸಸ್ ನಾಜ್ ಫೌಂಡೇಶನ್ ವಿರುದ್ಧ ನೀಡಿರುವ ತೀರ್ಪಿನ ಬಗ್ಗೆ ನಮಗೆ ಅತೀವ ನಿರಾಸೆಯಾಗಿದೆ. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದವರನ್ನು ಈ ದೇಶದ ಸಂಪೂರ್ಣ ಪ್ರಜೆಗಳೆಂದು ದೆಹಲಿ ಉಚ್ಚ ನ್ಯಾಯಾಲಯವು ನೀಡಿರುವ ಚಾರಿತ್ರಿಕ ತೀರ್ಪನ್ನು ರದ್ದುಗೊಳಿಸಿ ಚರಿತ್ರೆಯ ಅಲೆಯನ್ನು ತಡೆಯುವ ಪ್ರಯತ್ನವಾಗಿದೆ. ಸರ್ವೋಚ್ಚ ನ್ಯಾಯಾಲಯವು ನಾಜ್ ಫೌಂಡೇಶನ್ ತೀರ್ಪನ್ನು ರದ್ದುಗೊಳಿಸಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರನ್ನು ಸ್ವತಂತ್ರಗೊಳಿಸಿದ ದೆಹಲಿ ಉಚ್ಚನ್ಯಾಯಾಲಯ ತೀರ್ಪಿನ್ನು ತಳ್ಳಿಹಾಕಿದೆ. ಸರ್ವೋಚ್ಚ ನ್ಯಾಯಾಲಯ ನೀಡಿರುವ ಈ ನ್ಯಾಯಸಮ್ಮತವಲ್ಲದ ತೀರ್ಪಿನಿಂದಾಗಿ ಭಾರತದ ಸಂವಿಧಾನ ಪ್ರಕಾರ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಘನತೆ ಮತ್ತು ಸಮಾನ ಹಕ್ಕುಗಳನ್ನು ಹತ್ತಿಕ್ಕಿದೆ. ಇದರಿಂದಾಗಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಂವಿಧಾನಾತ್ಮಕ ಹಕ್ಕುಗಳನ್ನು ಕಿತ್ತುಕೊಂಡು ತಾರತಮ್ಯ, ದೌರ್ಜನ್ಯ ಮತ್ತು ಕಿರುಕುಳಗಳಿಗೆ ತುತ್ತಾಗುವಂತೆ ಮಾಡಿದೆ.

ದುರಾದೃಷ್ಟಕರವೇನೆಂದರೆ, ಭಾರತೀಯ ಗಣರಾಜ್ಯದ ಸಂಸ್ಥಾಪಕರ ದೂರದೃಷ್ಟಿಯಂತೆ ದೆಹಲಿ ಉಚ್ಚನ್ಯಾಯಾಲಯವು ನೀಡಿರುವ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ಸಂಪೂರ್ಣವಾಗಿ ಮರೆತಿದೆ. ಈ ತೀರ್ಪು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರನ್ನು ಮತ್ತೆ ಅಪರಾಧಿಕರಿಸಿ ಎಲ್ಲರನ್ನೂ ಒಗ್ಗೂಡಿಸುವುದೇ ಭಾರತದ ಸಂವಿಧಾನದ ಆಶಯವೆಂದು ವರ್ಣಿಸಿದ ಜವಾಹರಲಾಲ್ ನೆಹರುರವರ ಮಾತನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ವೈವಿಧ್ಯಮಯವಾದ ಈ ದೇಶಕ್ಕೆ ಸಂವಿಧಾನ ಶಿಲ್ಪಿ ಡಾ॥ ಅಂಬೇಡ್ಕರ್‌ರವರು ಹೇಳಿದಂತೆ ಸಂವಿಧಾನಿಕ ನೈತಿಕತೆಯ ತತ್ವವೊಂದೇನೆಂದರೆ ಬಹುಸಂಖ್ಯಾತರು, ಬಹುಸಂಖ್ಯಾತರೆಂಬ ಒಂದೇ ಕಾರಣಕ್ಕೆ ಅವರು ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮಾಡುವ ಹಕ್ಕಿಲ. ಈ ತತ್ವವನ್ನು ಈ ತೀರ್ಪು ಸಂಪೂರ್ಣವಾಗಿ ಕಡೆಗಣಿಸಿದೆ.

ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವವಾದ ಈ ರಾಷ್ಟ್ರದ ಸಂವಿಧಾನದ ಮೂಲಭೂತ ತತ್ವಗಳೇ ಸಮಾನತೆ ಹಾಗೂ ಪ್ರತೀ ಪ್ರಜೆಯ ಘನತೆಯನ್ನು ಗೌರವಿಸುವುದಾಗಿದೆ. ಆದರೆ ಸಂವಿಧಾನದ ತತ್ವಗಳನ್ನು ಕಾಪಾಡಬೇಕಾದ ಸರ್ವೋಚ್ಚ ನ್ಯಾಯಾಲವೇ ಈ ತತ್ವಗಳನ್ನು ಉಲ್ಲಂಘಿಸಿದೆ.

ಸರ್ವೋಚ್ಚ ನ್ಯಾಯಾಲಯದ ಇತಿಹಾಸದಲ್ಲಿ ಅದು ನೀಡಿರುವ 1975ರ ತುರ್ತು ಪರಿಸ್ಥಿತಿ ಕಾನೂನು ಬದ್ಧವಾಗಿದೆ ಎಂದು ಹಾಗೂ 1979ರ ಮಥುರಾ ಬಲಾತ್ಕಾರವನ್ನು ನ್ಯಾಯಸಮ್ಮತವೆಂಬ ನೀಡಿದ ತೀರ್ಪುಗಳು ಕಳಂಕಿತವಾಗಿದ್ದು 2013 ರ ಈ ತೀಪು ಸಹ ಈ ಪಟ್ಟಿಗೆ ಸೇರಿದೆ. 1975 ರಲ್ಲಿ *ಎಡಿಎಂ ವಿರುದ್ಧ ಮಧ್ಯಪ್ರದೇಶ ರಾಜ್ಯ* ಪ್ರಕರಣದಲ್ಲಿ ದೇಶದ ಪ್ರಜೆಗಳ ಜೀವಿಸುವ ಹಕ್ಕನ್ನು ಕಿತ್ತುಕೊಂಡ ತುರ್ತು ಪರಿಸ್ಥಿತಿಯು ನ್ಯಾಯ ಸಮ್ಮತವಾಗಿದೆ ಎಂದು (ಎಮರ್ಜೆನ್ಸಿ) ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಅದಲ್ಲದೇ 1979ರ ಮಥುರಾ ಬಲಾತ್ಕಾರ ಪ್ರಕರಣದಲ್ಲಿ ಬಲಾತ್ಕಾರಕ್ಕೆ ಒಳಪಟ್ಟ ಮಹಿಳೆಯರನ್ನು ನಂಬಬಾರದೆಂದು ನುಡಿದಂತೆ ತೀರ್ಪು ನೀಡಿತ್ತು. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಘನತೆಯ ಮತ್ತು ಜೀವನವನ್ನು ಉಲ್ಲಂಘಿಸುವ ಈ ವಸಾಹತುಶಾಹಿ ಕಾನೂನನ್ನು ಎತ್ತಿಟ್ಟ ಇಂದು 2013 ರಂದು ನೀಡಿರುವ ಈ ತೀರ್ಪಿನ ಮೂಲಕ ಸರ್ವೋಚ್ಚ ನ್ಯಾಯಾಲಯವು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಮನುಷ್ಯರಲ್ಲವೆಂದು ನುಡಿದಿದೆ.

ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಈ ತೀರ್ಪನ ಪರಿಣಾಮವನ್ನು ಬದಿಗಿಟ್ಟು ತಮ್ಮ ಜೀವನವನ್ನು ಮುಂದುವರಿಸುತ್ತಾರೆ. ನಮ್ಮ ಮುಂದಿನ ದಾರಿಯು ಕಷ್ಟಕರವಾಗಿದ್ದರೂ ನಮ್ಮ ಹೋರಾಟವನ್ನು ಮುನ್ನಡೆಸಲು ಈ ಸಮುದಾಯವು ನಮಗೆ ಬಲವಾದ ಪ್ರೇರಣೆಯಾಗಿದೆ. ಕಳೆದ ಹತ್ತು ವರ್ಷಗಳಿಂದ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಬಾಳನ್ನು ಬಹಿರಂಗವಾಗಿ ನಡೆಸುತ್ತಿದ್ದಾರೆ ಹಾಗೂ ಪೌರತ್ವ ಸಮಾನತೆಯ ಹಕ್ಕಿಗಾಗಿ ಸಾರ್ವಜನಿಕವಾಗಿ ಹೋರಾಡುತ್ತಿದ್ದಾರೆ. ಚರಿತ್ರೆಯ ಪುಟವು ತಿರುಗಿದೆ. ಜಗತ್ತಿನ ಯಾವ ಶಕ್ತಿಯು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರನ್ನು ತಮ್ಮ ಸ್ವತಂತ್ರ, ಸಮಾನತೆ ಮತ್ತು ಘನತೆಯ ಹಕ್ಕಿಂದ ದೂರವಿಡಲು ಸಾಧ್ಯವಿಲ್ಲ.

ಇವತ್ತಿನ ಅನ್ಯಾಯಕರವಾದ ಈ ತೀರ್ಪುನ್ನು ಮೀರಿ ನಮ್ಮ ಚಳುವಳಿಯು ಮುಂದುವರೆಯಲಿದೆ. ಚಳುವಳಿಯು ಬಹು ದೀರ್ಘವಾಗಬಹುದು ಹಾಗೂ ಬಹುಕಾಲ ತೆಗೆದುಕೊಂಡರೂ ನ್ಯಾಯವು ನಮ್ಮದಾಗಿರುತ್ತದೆ ಎಂಬ ನಂಬಿಕೆ ನಮಗಿದೆ. ಪರಿಛೇದ 377 ಇತಿಹಾಸದ ಕಸದ ತೊಟ್ಟಿಯಲ್ಲಿ ಸೇರುವ ತನಕ ನಮ್ಮ ಹೋರಾಟವನ್ನು ದಿನದಿನಕ್ಕೆ ಬಲಿಷ್ಟಗೊಳಿಸುತ್ತೇವೆಂದು ಪ್ರಮಾಣಿಸುತ್ತೇವೆ

**ಲೈಂಗಿಕ ಕಾರ್ಮಿಕರ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಒಕ್ಕೂಟ**
ಬೆಂಗಳೂರು

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಗೌತಮನ್ ರಂಗನಾಥನ್ 97398 41724 gowthaman.ranganathan@gmail.com

ಅಕ್ಕೈ ಪದ್ಮಶಾಲಿ 99800 42532 akkaipadmashali@gmail.com

ಮನೋಹರ್ ಎಲವರ್ತಿ 9632223460 manoharban@gmail.com

ವಿನಯ್ ಚಂದ್ರನ್, 9844181294 vinu228@yahoo.com

ಗುರುಕಿರಣ್, ಸಂಗಮ, 98803 65692 gurukiran.k@gmail.com

ಶುಭ ಚಾಕೋ, ಅನೇಕ, 81977 71372 shubha.chacko@gmail.com

ಮಾರಿ ಇವಾ ಮೆಂಡಿಸ್, ವ್ಯಾಕ್ 81970 79427, mari.eva.mendes@gmail.com